International Journal of Kannada Research 2021; 7(2): 127-133

International Journal of Kannada Research
www.kannadajournal.com

**ISSN: 2454–5813**
IJKR 2021; 7(2): 127-133
© 2021 IJKR
www.kannadajournal.com
Received: 28-02-2021
Accepted: 30-03-2021

**Dr. P Ashok Kumar Matti**
Associate Professor, Department of Kannada, Govt Degree College Yadagiri, Karnataka, India

**Dr. Shivaganga Nilaya**
Department of Kannada, Govt Degree College Yadagiri, Karnataka, India

**Corresponding Author:**
**Dr. P Ashok Kumar Matti**
Associate Professor, Department of Kannada, Govt Degree College Yadagiri, Karnataka, India

# ಶ್ರೀ ಶಾಂತವೀರ ಮಹಾಸ್ವಾಮಿಗಳು ಮತ್ತು ಶಿವಯೋಗ

**Dr. P Ashok Kumar Matti and Shivaganga Nilaya**

## ೧. ಪ್ರಸ್ತಾವನೆ

ಪ್ರಾಚೀನ ಕಾಲದಿಂದಲೂ ಭಾರತ ಪುಣ್ಯಭೂಮಿ, ಭಕ್ತಿಯ ನೆಲೆಬೀಡು, ಶ್ರದ್ಧಾ ಭಕ್ತಿಯ ತವರೂರು. ಆಧ್ಯಾತ್ಮಿಕ ಹಾಗೂ ದಾರ್ಶನಿಕ ಚೇತನಗಳ ಬೀಡಾಗಿದೆ. ಸಹಸ್ರಾರು ಸಂಖ್ಯೆಯಲ್ಲಿ ಋಷಿಮುನಿಗಳು, ಸಾಧುಸಂತರು ಹಾಗೂ ಶರಣ- ದಾಸರು ಧರ್ಮದ ವಿನಾಶವಾಗುವ ಸಂದರ್ಭ ಬಂದಾಗಲೆಲ್ಲ ಧರ್ಮ ರಕ್ಷಣೆಗಾಗಿ ಭೂಮಿಗೆ ಅವತರಿಸಿ ಬಂದಿದ್ದಾರೆ. ಸಮಾಜದ ಆಧಾರ ಸ್ತಂಭಗಳಾದ ಧರ್ಮ, ನ್ಯಾಯ ನೀತಿ, ಪ್ರೀತಿ ಪ್ರೇಮ ಮತ್ತು ಗೌರವಾದರಗಳು ಜನತೆಯ ಮನದಾಳದಲ್ಲಿ ಬೇರೂರುವಂತೆ ಮಾಡಿದ್ದಾರೆ. ಶಾಂತಿ ಸಂಯಮಗಳು ಬೆಳೆಯುವ ಹೂದೋಟಕ್ಕೆ ಧರ್ಮ ಗುರುಗಳಿಂದ, ಸಮಾಜ ಸುಧಾರಕರಿಂದ ನೀರೆರೆಯುವ ಪ್ರಕ್ರಿಯೆ ನಿರಂತರವಾಗಿ ನಡೆದು ಬಂದಿದೆ. ಜಾತಿ- ಮತ- ಪಂಥಗಳ ಸಂಕೋಲೆಗಳಿಂದ ಹೊರಬಂದ ಮಹಾತ್ಮರು ವಿಶ್ವಮಾನ್ಯ ತತ್ವಗಳನ್ನು ಪ್ರತಿಪಾದಿಸಿದ್ದಾರೆ. ಅವರೆಲ್ಲರ ಅನವರತ ಪರಿಶ್ರಮ ಹಾಗೂ ಸಾಧನೆಯಿಂದಾಗಿ ಮಾನವ ಜನಾಂಗಕ್ಕೆ ಮುಸುಕಿದ ಗಾಢಾಂಧಕಾರವನ್ನು ಹೊಡೆದೋಡಿಸಲು ಸಾಧ್ಯವಾಯಿತು. ಜನತೆಯ ಜೀವನಮಟ್ಟವನ್ನು ಸುಧಾರಿಸಲು, ಸಮಾಜವನ್ನು ಸತ್ಪರಂಪರೆಯಲ್ಲಿ ಮುನ್ನಡೆಸಲು ಅನಾದಿಕಾಲದಿಂದ ಇಂದಿನವರೆಗೆ ಹಲವಾರು ವಿಶ್ವ ವಿಭೂತಿ ಪುರುಷರು ಅವತಾರವೆತ್ತಿದ್ದಾರೆ. ಬುದ್ಧ, ಬಸವ, ಷಣ್ಮುಖ ಶಿವಯೋಗಿಗಳು, ಸಂತ ಶಿಶನಾಳ ಶರೀಫ, ಹಾನಗಲ್ಲ ಕುಮಾರಸ್ವಾಮಿಗಳು ಮೊದಲಾದವರು. ಅಂಥ ದಿವ್ಯಚೇತನ ಮೂರ್ತಿಗಳಲ್ಲಿ ಶ್ರೀ ಶಾಂತವೀರ ಮಹಾಸ್ವಾಮಿಗಳು ಒಬ್ಬರಾಗಿದ್ದಾರೆ. ಸಾಕ್ಷಾತ್ ಪರಶಿವನ ಅಂಶವನ್ನು ಹೊಂದಿ ಶಾಂತವೀರ ಎಂಬ ನಾಮವನ್ನು ಪಡೆದು ಭುವಿಗೆ ಅವತರಿಸಿ ಬಂದಿದ್ದಾರೆ. ಆ ಮಹಾಚೇತನವೇ ಈ ಇಹಲೋಕವನ್ನು ಸ್ವರ್ಗವನ್ನಾಗಿಸಿದ ಮಹಾನ್ ತೇಜೋಮೂರ್ತಿ ಈ ಶಾಂತವೀರ ಮಹಾಸ್ವಾಮಿಗಳು.

## ೨. ಶಾಂತವೀರ ಮಹಾಸ್ವಾಮಿಗಳ ಜೀವನ.

ಕನ್ನಡ ನಾಡು ಪವಿತ್ರ ಪುಣ್ಯಭೂಮಿ. ಅನೇಕ ಜನ ಶರಣರಿಗೆ ಹಾಗೂ ಮಹಾನ್ ಯೋಗಿಗಳಿಗೆ ಜನ್ಮವಿತ್ತು ಕೀರ್ತಿ ಪಡೆದ ನಾಡು. ಈ ನಾಡೇ ಶ್ರೀ ಶಾಂತವೀರ ಮಹಾಸ್ವಾಮಿಗಳು ಜನಿಸಿದ ಪುಣ್ಯಭೂಮಿ. ಕರ್ನಾಟಕದ ಜ್ಯೋತಿಪುರದ ಪವಿತ್ರ ಗ್ರಾಮವಾದ ಮಂಗಾಪೂರದಲ್ಲಿ ವಾಸಿಸುತ್ತಿದ್ದ ಮ್ಯಾಗೇರಿಯವರೆಂದು ಪ್ರಸಿದ್ಧಿ ಪಡೆದ ರೇಣುಕರ ಗೋತ್ರದಲ್ಲಿ ಸಜ್ಜನರೂ, ಸುಸಂಸ್ಕೃತರು, ಸಹೃದಯರು ಹಾಗೂ ಜನರ ಅಪಾರ ಗೌರವಾದರಗಳಿಗೆ ಪಾತ್ರರಾದ ಶ್ರೀ ಬಸವಮೂರ್ತಿ ಮತ್ತು ಅವರ ಪತ್ನಿ ಗಿರಿಜಾಂಬೆ ಪುಣ್ಯ ದಂಪತಿಗಳ ಉದರದಲ್ಲಿ ಶ್ರೀ ಶಾಂತವೀರೇಶ್ವರರು ಜನಿಸಿದರು. ಈ

ಶಿವಭಕ್ತ ದಂಪತಿಗಳು ಬೆಳಗಿನ ಜಾವದಲ್ಲಿಯೇ ಎದ್ದು ಮಿಂದು ಮಡಿಯನ್ನುಟ್ಟು ಶಿವಲಿಂಗಕ್ಕೆ ಪೂಜಿಸಿ ನಮಿಸುತ್ತಿದ್ದರು. ಧೂಪ ದೀಪಾರತಿ, ಬಿಲ್ವಪತ್ರೆ, ಗಂಧ ವಿಭೂತಿಗಳಿಂದ ಆ ಇಂದೂಧರನಿಗೆ ಭಕ್ತಿಪೂರ್ವಕವಾಗಿ ಅರ್ಚನೆಯನ್ನು ಮಾಡುತಿದ್ದರು. ಇಂತಹ ಶಿವಸ್ವರೂಪಿಗಳ ಉದರದಲ್ಲಿ ಜನಿಸಿದ ಶಾಂತವೀರರಿಗೆ ದೊರಕಿದ್ದು ಭಕ್ತಿಮಯವಾದ ವಾತಾವರಣ. ಮನಸಿಗೆ ಅಹ್ಲಾದವನ್ನುಂಟು ಮಾಡುವಂತಹ ತಂದೆ ತಾಯಿಗಳ ಅಪರಿಮಿತವಾದ ಪ್ರೀತಿ, ಬಾಲ್ಯಾವಸ್ಥೆಯಲ್ಲಿಯೇ ದೊರೆತ ಶಿವದೀಕ್ಷೆ ಆ ನಾಗಾಭರಣನ ಸಾಮೀಪ್ಯ ಹಾಗೂ ಶಿವನಾಮ ಸ್ಮರಣೆ ಎಲ್ಲವೂ ಬಾಲಕ ಶಾಂತವೀರರ ಮನಸನ್ನು ಆಧ್ಯಾತ್ಮದ ಕಡೆಗೆ ಸೆಳೆದವು.

ಬೀಜದಂತೆ ಬೆಳೆ ತಂದೆ ತಾಯಿಯಂತೆ ಮಗ ಎನ್ನುವ ಉಕ್ತಿಯಂತೆ ಸರ್ವಗುಣ ಸಂಪನ್ನರಾಗಿ ಪ್ರಕೃತಿಯ ಮಡಿಲಲ್ಲಿ, ಸದ್ವಂಶದ ಆಶ್ರಯದಲ್ಲಿ,ಪರಶಿವನ ಕರುಣೆಯ ಛಾಯೆಯಲ್ಲಿ ಹಾಗೂ ಗುರು ಹಿರಿಯರ ಆಶೀರ್ವಾದದೊಡನೆ ಬೆಳೆದ ಶಾಂತವೀರರು ಹೆಸರಿನಂತೆ ಶಾಂತ ಸ್ವಭಾವವನ್ನೆ ಹೊಂದಿ ನಿಜವಾಗಿಯೂ ಶಾಂತವೀರರೇ ಆದರು. ತಂದೆತಾಯಿಗಳ ಮುದ್ದುಮಗನಾಗಿ ನೆರೆಹೊರೆಯವರ ಪ್ರೀತಿಯ ಕಣ್ಮಣಿಯಾಗಿದ್ದರು.

ಶಿವದೀಕ್ಷೆಯನ್ನು ಪಡೆದ ಶಾಂತವೀರರು ಶಿವನನ್ನು ಮನದಲ್ಲೇ ಸ್ಮರಿಸುತ್ತ ಶಿವನನ್ನು ಸದಾಕಾಲ ಪೂಜಿಸುತ್ತ ಧರ್ಮ ಮಾರ್ಗದಲ್ಲಿ ನಡೆದು ಶಿವ ಭಾವವನ್ನು ಹೊಂದಿ ಪರಶಿವನ ನೆನೆಯುತ್ತ ಬೆಳೆಯತೊಡಗಿದರು. ಎಲ್ಲೆಲ್ಲಿಯೂ ಶಿವನಾಮವನ್ನೆ ಹಾಡುತ್ತ ಶಿವಮಂತ್ರ ಜಪಿಸುತ್ತ ಶಿವನಾಮ ಸ್ಮರಣೆಯೆ ಆಹಾರವಾಗಿ ಸ್ವೀಕರಿಸುತ್ತ ಯಾವುದೇ ರೀತಿಯ ಕರ್ಮದ ಕೋಟಲೆಗೆ ಸಿಲುಕದೆ ನಿಜ ಶರಣನಂತೆ ಇರುತ್ತಿರುವ ಶಾಂತವೀರರ ಭಕ್ತಿಭಾವಗಳಿಗೆ ಜನ ಬೆರಗಾಗುತ್ತಿದ್ದರು. ತಂದೆ ಕೈಗೊಳ್ಳುವ ವ್ಯವಸಾಯ ಕಾರ್ಯದಲ್ಲಿ ತಂದೆಗೆ ಸಹಾಯಕನಾಗಿ ಕೆಲಸ ಮಾಡಲು ಶಾಂತವೀರರು ಹೊಲಕ್ಕೆ ಹೋಗುತ್ತಿದ್ದರು. ಹಾಗೆಯೇ ದನಕರುಗಳನ್ನು ತನ್ನ ಜೊತೆಗೆ ತೆಗೆದುಕೊಂಡು ಹೋಗುವರು. ಪ್ರಾಣಿ ಪಕ್ಷಿಗಳ ಮೇಲೆ ಶಾಂತವೀರರಿಗೆ ಎಲ್ಲಿಲ್ಲದ ಅಕ್ಕರೆ. ದನಕರುಗಳನ್ನು ಮೇಯಿಸುತ್ತಲೆ ಏಕಾಂತ ಸ್ಥಳವನ್ನು ಹುಡುಕಿ ದೇವರಧ್ಯಾನ ಮಾಡುತ್ತಿದ್ದರು.

ಸದಾಕಾಲಧ್ಯಾನದಲ್ಲಿನಿರತರಾಗಿರುತ್ತಿದ್ದ ಶಾಂತವೀರರಿಗೆ ಬೇರೇನೂ ಬೇಡವೆನಿಸಿತು. ಯಾರೊಡನೆಯೂ ಬೇರೆಯದೆ ಸದಾ ಮೌನಿಯಾಗಿರುತ್ತಿದ್ದರು. ಮಗನ ಈ ವರ್ತನೆಯನ್ನು ಕಂಡ ತಂದೆ ತಾಯಿಗಳ ಮನಸಿನ ಚಿಂತೆ ಹೆಚ್ಚಾಯಿತು. ಮಗನ ಈ ವರ್ತನೆಗೆ ಕಾರಣವನ್ನು ತಿಳಿಯದೆ ದಾರಿಕಾಣದಾದರು. ಅದೇ ಚಿಂತೆಯಲ್ಲಿ ಒಂದು ಸಾರಿ ಗುರುಗಳ ಕಣ್ಣಿಗೆ ಹಾಕುವುದು ಒಳ್ಳೆಯದೆಂದು ತಿಳಿದು ಚಿತ್ರದುರ್ಗದಲ್ಲಿ ನೆಲೆಸಿರುವ ಮಹಾನ್ ತಪಸ್ವಿಗಳಾದ ಬೃಹ್ಮಠದ ಜಗದ್ಗುರುಗಳ ಸನ್ನಿಧಿಗೆ ಕರೆದುಕೊಂಡು ಹೋದರು. ಗುರುಗಳು ಶಾಂತವೀರರ ಮುಖ ನೋಡಿದ ಕೂಡಲೇ"ಈತನೊಬ್ಬ ಮಹಿಮಾ ಪುರುಷ, ಕಾರುಣಿಕ ಪುರುಷನಾಗಿ ಲೋಕ ಕಲ್ಯಾಣವನ್ನು ಕೈಗೊಳ್ಳುತ್ತಾನೆ. ಈತನನ್ನು ನಮ್ಮ ಸನ್ನಿಧಾನದಲ್ಲೇ ಇಟ್ಟುಕೊಳ್ಳುವೆವು, ಇಲ್ಲಿಯೇ ಬಿಟ್ಟು ಹೋಗಿ ಎಂದು ಹೇಳಿದರು. ಗುರುಗಳ ಮಾತಿನಂತೆ ಶಾಂತವೀರರ ತಂದೆ ತಾಯಿಗಳು ಸಂತೋಷದಿಂದ ಅವರನ್ನು ಗುರುಗಳ ಸನ್ನಿಧಿಯಲ್ಲಿಯೆ ಬಿಟ್ಟು ಬಂದರು. ಅಂದಿನಿಂದಲೇ ಜಗದ್ಗುರುಗಳು ಶಾಂತವೀರರಿಗೆ ವೀರಶೈವ ಧರ್ಮದ ತತ್ವಗಳನ್ನು ಪರಮಶ್ರೇಷ್ಠವಾದ ಶಿವಾನುಭ ಶಾಸ್ತ್ರವನ್ನು ಹೇಳಿಕೊಟ್ಟರು. ಗುರುಗಳು ಹೇಳಿಕೊಟ್ಟ ವಿಷಯಗಳ ಆಳ ಅಗಲಗಳನ್ನು ಅಧ್ಯಯನ ಮಾಡಿದ ಕಾರಣ ಮುಂದೆ ಶಾಂತವೀರರಿಗೆ ಶಿವಯೋಗ ತತ್ವದ ಪ್ರತಿಪಾದನೆಯ ಮಾರ್ಗಕ್ಕೆ ನಾಂದಿಯಾಗುತ್ತವೆ. ಶಿವತತ್ವ ಮಾರ್ಗವು ಸಂಪೂರ್ಣವಾಗಿ ಶಾಂತವೀರರ ಮನಸ್ಸನ್ನು ಆವರಿಸಿಕೊಳ್ಳುತ್ತದೆ.

### ೩. ಶಿವಯೋಗದ ಮಹಿಮೆ.

ಆಧ್ಯಾತ್ಮಿಕ ಮತ್ತು ಧಾರ್ಮಿಕ ಪರಂಪರೆಯಲ್ಲಿ' ಯೋಗಕ್ಕೆ' ಮಹತ್ವದ ಸ್ಥಾನವಿದೆ. ಯೋಗ ಮಾನವನ ದೈಹಿಕ ಮತ್ತು ಮಾನಸಿಕ ಸ್ವಭಾವ.ಗುಣ, ನೀತಿ ನಿಯಮಗಳನ್ನು ನಿಯಂತ್ರಿಸುತ್ತದೆ. ಮನುಷ್ಯನ ಒಳಿತು ಮತ್ತು ಕೆಡುಕಿಗೆ ಮನಸ್ಸೇ ಕಾರಣ. ಆ ಮನಸನ್ನು ನಿಯಂತ್ರಿಸುವ ಸಾಧನವೇ ಯೋಗ. ಆಧ್ಯಾತ್ಮ ಸಾಧನೆಯಿಂದ ಜೀವಾತ್ಮವು ಪರಮಾತ್ಮನಲ್ಲಿ ಒಂದಾಗುವುದೇ ಯೋಗವೆನಿಸುವುದು. ದೇಹ ಮತ್ತು ಮನಸ್ಸುಗಳನ್ನು ಪರಿಶುದ್ಧಗೊಳಿಸುವ ಪರಮ ಸಾಧನವೇ ಯೋಗ ಮಾರ್ಗ. ಭಕ್ತಿ, ಜ್ಞಾನ, ಕರ್ಮಗಳನ್ನು ಸಮನ್ವಯಗೊಳಿಸುವುದೇ ಶಿವಯೋಗ. ಆತ್ಮ ಶಕ್ತಿಯನ್ನು ವಿಕಾಸಗೊಳಿಸಿ ಪರಮಾತ್ಮನಲ್ಲಿ ಒಂದಾಗುವಂತೆ ಮಾಡುವುದೇ ಯೋಗದ ಪರಮ ಗುರಿ. ಅದು ಮನುಷ್ಯನ ದೈಹಿಕ ಮಾನಸಿಕ ಹಾಗೂ ಬೌದ್ಧಿಕ ಪರಿಶುದ್ಧತೆಯಿಂದ ಸಾಧ್ಯವಾಗುತ್ತದೆ. ಮನುಷ್ಯನ ಮನಸ್ಸು ಅನೇಕ ಕರ್ಮಗಳ ಜಂಜಾಟಕ್ಕೆ ಸಿಲುಕಿ ದುಃಖಕ್ಕೀಡಾಗಿದೆ. ಆ ಮನಸ್ಸು ದುಃಖದಿಂದ ದೂರವಾಗಿ ವಿದ್ಯೆಯಿಂದ ಕೂಡಿ ಚಿತ್ತ ಚಾಂಚಲ್ಯಕ್ಕೆ ಗುರಿಯಾಗದೇ ಮನಸ್ಸನ್ನು ಏಕೀಕೃತಗೊಳಿಸಬೇಕು. ಅದಕ್ಕಿರುವ ಒಂದೇ ಪರಿಹಾರವೆಂದರೆ ಶಿವಯೋಗ. ಈ ಚಿತ್ತಶುದ್ಧಿಯು ಜಪ,ತಪ, ಧ್ಯಾನ, ಅರ್ಚನೆ ಹಾಗೂ ಪೂಜೆ ಮುಂತಾದವುಗಳಿಂದ ಉಂಟಾಗುತ್ತದೆ. ಗುರು ಕಾರುಣ್ಯದಿಂದ, ಲಿಂಗಪೂಜೆಯಿಂದ, ತಪಸ್ಸನ್ನು ಮಾಡುವುದರಿಂದ, ಮಂತ್ರವನ್ನು ಜಪಿಸುವುದರಿಂದ ಮನಸ್ಸಿನಲ್ಲಿ ಉದ್ಭವಿಸಿದ ಮನೋಕ್ಲೇಶಗಳು ದೂರವಾಗಿ ನಮ್ಮ ಚಿತ್ತಕ್ಕೆ ಮುತ್ತಿದ ಅವಿದ್ಯೆ, ಅಹಂಕಾರ, ಸ್ವಾರ್ಥ, ರಾಗ- ದ್ವೇಷ ಮುಂತಾದವುಗಳಿಂದ ಮುಕ್ತಿ ಪಡೆಯಬಹುದು. ಈ ಎಲ್ಲ ದುಷ್ಟತನ ನಾಶವಾದಾಗ ಆತ್ಮನ

ಪರಮ ಸ್ವರೂಪ ಗೋಚರವಾಗಿ ಪರಮಾತ್ಮನ ಸಂಯೋಗ ಸುಲಭವಾಗಿ ದೊರೆಯುತ್ತದೆ.

ಯೋಗದ ಪರಂಪರೆ ಅತೀ ಪುರಾತನವಾದದ್ದು. ಅದರ ಮೊದಲ ಉಲ್ಲೇಖ ಋಗ್ವೇದದಲ್ಲಿ ಕಂಡು ಬರುತ್ತದೆ. ಹಿರಣ್ಯಗರ್ಭ ಯೋಗದ ಮೂಲ ಪ್ರವರ್ತಕ ಎಂದು ಯೋಗಶಾಸ್ತ್ರ ತಿಳಿಸುತ್ತದೆ. ಇವನು ರುದ್ರನಿಂದ ಸೃಷ್ಟಿಯಾದನೆಂಬ ನಂಬಿಕೆಯಿದೆ. ಹಿರಣ್ಯಗರ್ಭನಿಂದ ಶಾಸ್ತ್ರ ಹುಟ್ಟಿದರೆ ರುದ್ರನಿಂದ ಯೋಗ ನಿರೂಪಿತವಾಯಿತು. ಹಿರಣ್ಯಗರ್ಭನ ಶಾಸ್ತ್ರವು ಬುದ್ಧಿ ಸಂಕೇತವೆಂದು ರುದ್ರನ ಯೋಗ ಶಕ್ತಿ ಸಂಕೇತವಾಗಿ ಮೂಡಿ ಬಂದಿವೆ. ಒಂದು ಬುದ್ಧಿ ಪ್ರಧಾನ, ಇನ್ನೊಂದು ಶಕ್ತಿ ಪ್ರಧಾನಯೋಗ ಎಂದು ಎರಡು ಭಾಗಗಳನ್ನು ಗುರುತಿಸಬಹುದು. ಹಿರಣ್ಯಗರ್ಭಯೋಗ ಎಲ್ಲಿ ಮುಗಿಯುತ್ತದೆಯೋ ಅಲ್ಲಿ ರುದ್ರಯೋಗ ಪ್ರಾರಂಭವಾಗುತ್ತದೆ."ಸರ್ವಯೋಗಕ್ಕೂ ಶಿವಯೋಗ ಮಹಾಯೋಗ"ಎನ್ನುವ ಸಿದ್ಧರಾಮರ ಯುಕ್ತಿಯಂತೆ ಇಲ್ಲಿಯವರೆಗೆ ವಿವರಿಸಿದ ಯೋಗಗಳಲ್ಲಿ ಶಿವಯೋಗ ಸರ್ವಶ್ರೇಷ್ಠವಾದುದು. ಇದು ಲಿಂಗಾಂಗ ಸಾಮರಸ್ಯವನ್ನು ಸಾಧಿಸಲು ಶರಣರು ಶೋಧಿಸಿದ ಸುಲಭ ಹಾಗೂ ಸುವ್ಯವಸ್ಥಿತ ನೂತನ ಉಪಾಸನ ಕ್ರಮವಾಗಿದೆ. ಹಠಯೋಗ, ಲಯಯೋಗ, ರಾಜಯೋಗ ಹಾಗೂ ಮಂತ್ರಯೋಗ ಎನ್ನುವ ನಾಲ್ಕು ಯೋಗಗಳು ಶರೀರ, ಪ್ರಾಣ, ಮನ ಮತ್ತು ಬುದ್ಧಿಗಳ ಶುದ್ಧೀಕರಣವಾಗಿ ವಿಕಾಸ ಹೊಂದುತ್ತದೆ. ಶಿವಯೋಗದಲ್ಲಿ ಇವೆಲ್ಲ ಶಕ್ತಿಗಳು ಒಟ್ಟಾರೆಯಾಗಿ ಸಮ್ಮಿಳಿತಗೊಂಡು ಲಿಂಗಾಂಗ ಸಾಮರಸ್ಯಕ್ಕೆ ಸಹಕಾರಿಯಾಗುತ್ತವೆ. ಅಂತೆಯೇ ಇದು ಪೂರ್ಣಯೋಗವೆನಿಸಿಕೊಳ್ಳುತ್ತದೆ. ಇಂತಹ ಮಹಿಮಾನ್ವಿತವಾದ ಶಿವಯೋಗದ ಅಂತರಾರ್ಥವನ್ನು ಬಲ್ಲ ಶ್ರೀ ಶಾಂತವೀರರು, ಯೋಗದ ಆಂತರ್ಯವನ್ನು, ಶಕ್ತಿಯನ್ನು ಹೀಗೆ ವಿವರಿಸುತ್ತಾರೆ.

> ಯೋಗದರ್ಥಗಳಿಂತು ಬಹುವಿಧ
> ವಾಗಿರಲು ಲಿಂಗಾಂಗಗಳ ಸಂಯೋಗ ವೇ
> ಶಿವಯೋಗ ವೆನಿಸುವುದಿನ್ನು ಸಾಗ್ರಹದಿಂ!
>
> ಯೋಗ ಭೇದಗಳನ್ನು ತಿಳಿಯಲ್ಕೆ
> ದಾಗಿರುವವುಗಳೊಳು ತಾಂ ಶಿವ
> ಯೋಗವೇ ಮೇಲೆನಿಸಿಕೊಳ್ಳುದು ವೀರಶೈವರೊಳು!!.

ಯೋಗ ಹಲವು ವಿಧಗಳಲ್ಲಿದ್ದರೆ ಲಿಂಗಾಂಗ ಸಾಮರಸ್ಯವೇ ಶಿವಯೋಗವೆನಿಸಿಕೊಳ್ಳುತ್ತದೆ. ಇನ್ನು ಯೋಗ ಭೇದಗಳನ್ನು ತಿಳಿದುಕೊಂಡರೆ ವೀರಶೈವರಿಗೆ ಶಿವಯೋಗವೇ ಶ್ರೇಷ್ಠವೆನಿಸಿಕೊಳ್ಳುವುದೆಂದು ಹೇಳುತ್ತಾರೆ. ಶಿವನ ನೆನಹು ತನ್ನ ಮನದಲ್ಲಿ' ಶಿವಯೋಗ'ವಾಗಿ ಸಮ್ಯಕ್ ಜ್ಞಾನದಲ್ಲಿ ಪರಮಸುಖವು ನೆಲೆಗೊಳ್ಳಲಿ ಎಂದು ಶ್ರೀಗಳು ಆಶಿಸುತ್ತಾರೆ. ಇಂತಹ ಸದ್ಭಾವವುಳ್ಳ ಶರಣರ ದರ್ಶನವಾದರೆ ಸಾಕು ಎಂದು ಬೇಡುವುದರ ಮೂಲಕ ಜೀವನದ ಪರಮ ಸುಖದಲ್ಲಿ ಶಿವಯೋಗವು ವಹಿಸುವ ಪ್ರಮುಖ ಪಾತ್ರವನ್ನು ಇಲ್ಲಿ ಎತ್ತಿ ತೋರಿಸುತ್ತಾರೆ. ತ್ಯಾಗಾಂಗ, ಭೋಗಾಂಗ, ಯೋಗಾಂಗಗಳಲ್ಲಿಯ ಇಷ್ಟ,ಪ್ರಾಣ, ಭಾವಲಿಂಗಗಳನ್ನು ಆರಾಧಿಸುವಲ್ಲಿ ಶಿವಯೋಗವಿರುವುದನ್ನು ಶ್ರೀಗಳು ತಿಳಿಸುತ್ತಾರೆ. ಹಾಗೆಯೇ ಶ್ರೀಗಳು ತಮ್ಮ ಸ್ವಂತ ಅನುಭವ ವೇದ್ಯವಾದ ಮಾತುಗಳಿಂದ ಸಂಸಾರದ ಅಜ್ಞಾನದ ಜಡವ ಕೆಡಿಸಿ ಶಿವಜ್ಞಾನಾನುಗ್ರಹ ಮಾಡಿದ ಆ ಶಿವಜ್ಞಾನವು ಸರ್ವಕರ್ಮವನ್ನರುಹಿತ್ತು ಎಂದು ತಾನು ಶಿವಜ್ಞಾನಿಯಾದ ರೀತಿಯನ್ನು ತಿಳಿಸುವರು. ಶ್ರೀಗಳ ದೃಷ್ಟಿಯಲ್ಲಿ ಶಿವಯೋಗದ ಅನುಸಂಧಾನವೆಂದರೆ ಅಂಗಸ್ವರೂಪಿಯಾಗಿರುವ ಪರಶಿವನು ಗುರುಕೃಪೆಯಿಂದ ಶಿಷ್ಯನ ಕರಸ್ಥಲದಲ್ಲಿ ಇಷ್ಟಲಿಂಗವೆನಿಸಿ, ಆತನ ಮನಸ್ಥಲದಲ್ಲಿ ಪ್ರಾಣಲಿಂಗವೆನಿಸಿ, ಭಾವಸ್ಥಲದಲ್ಲಿ ಭಾವಲಿಂಗವೆನಿಸಿ ಶಿವಯೋಗ ಅನುಸಂಧಾನವಾಗುವುದು. ಶಿವಯೋಗ ಸಾಧನೆಯಲ್ಲಿ ಈ ಲಿಂಗಾನುಸಂಧಾನವು ಅವಶ್ಯಕವಾಗಿ ಕೈಗೊಳ್ಳಬೇಕಾದ ಕ್ರಿಯೆಯಾಗಿದೆ. ಇದರಿಂದ ಭಾವಸಂಸ್ಕಾರ ಹೊಂದಿ ತನು, ಮನ, ಪ್ರಾಣಗಳಿಗೆ ಮುಸುಕಿದ ತಮಂಧವು ಅಡಗಿ ಪರಶಿವನ ತೇಜಸ್ಸಿನ ದರ್ಶನವಾಗುತ್ತದೆ. ಅದರೊಡನೆ ಒಂದಾಗುವ ಈ ಅವಕಾಶವನ್ನೇ ಲಿಂಗಾನುಸಂಧಾನವೆಂದು ಕರೆಯುತ್ತಾರೆ ಎಂದು ಅಭಿಪ್ರಾಯಪಡುವ ಶ್ರೀಗಳು ತಾವು ಸಾಕ್ಷಾತ್ಕರಿಸಿಕೊಂಡ ಸತ್ಯವನ್ನು ಬಿಚ್ಚಿಡುತ್ತಾರೆ. ಶಿವಯೋಗ ಸಾಧಕನು ತನ್ನ ಸಾಧನೆಯನ್ನು ದೃಷ್ಟಿಯಿಂದಲೆ ಪ್ರಾರಂಭಿಸುತ್ತಾನೆ. ಇಷ್ಟಲಿಂಗದಲ್ಲಿ ದೃಷ್ಟಿ ನೆಟ್ಟು ಇಷ್ಟಲಿಂಗ ನಿರೀಕ್ಷಣೆ ಮಾಡುವುದರ ಮೂಲಕ ಲಿಂಗದ ಸಾಕ್ಷಾತ್ಕಾರ ಸಾಧ್ಯವಾಗುತ್ತದೆ. ಇಷ್ಟಲಿಂಗವನ್ನು ಅಂಗದ ಮೇಲೆ ಧರಿಸಿದ ಬಳಿಕ ಅದನ್ನು ಅನುಸಂಧಾನ ಮಾಡಿಕೊಳ್ಳುವುದರ ಮೂಲಕ ಏಕಾಗ್ರತೆಯನ್ನು ಸಾಧಿಸಬಹುದು. ಇದಕ್ಕೆ ಮನಸ್ಸನ್ನು ಒಂದುಗೂಳಿಸುವ ಏಕೀಕೃತ ಭಾವ ನೆಲೆಸುವುದು ಎನ್ನುತ್ತಾರೆ ಶ್ರೀಗಳು. ಲಿಂಗಾನು ಸಂಧಾನಕ್ಕೆ ಪರಮ ಪವಿತ್ರವಾದ ದೃಷ್ಟಿ ಲಿಂಗದ ಮೇಲೆ ಬಿದ್ದಾಗ ತನು ಮನಗಳಿಂದ ಏಕೋಭವವುಂಟಾಗಿ ಲಿಂಗದ ತೇಜಸ್ಸು ಕಂಗಳಲ್ಲಿ ಹೊಳೆಯಾಗಿ ಹರಿಯುತ್ತದೆ. ಈ ಲಿಂಗಾಂಗ ಸಾಮರಸ್ಯದ ದಿವ್ಯಾನುಭವವನ್ನು ಶ್ರೀ ಶಾಂತವೀರ ಮಹಾಸ್ವಾಮಿಗಳು ತಮ್ಮ ಪರಮ ಜ್ಞಾನಾಮೃತದಿಂದ ಅಭಿವ್ಯಕ್ತಪಡಿಸಿದ್ದಾರೆ.

### ೪. ಶಿವಯೋಗದ ಪ್ರಕಾರಗಳು.

ಶಿವಯೋಗ ಸಾಧನೆಯಲ್ಲಿ ಅನೇಕ ಪ್ರಕಾರಗಳಿವೆ. ಆ ಪ್ರಕಾರಗಳನ್ನು ಶಾಂತವೀರ ಸ್ವಾಮಿಗಳು ನಾಲ್ಕು ವಿಧಗಳಲ್ಲಿ ವಿಂಗಡಿಸುತ್ತಾರೆ. ಅವುಗಳೆಂದರೆ ಮಂತ್ರಯೋಗ, ರಾಜಯೋಗ, ಹಠಯೋಗ ಹಾಗೂ ಲಯಯೋಗಗಳೆಂದು.

ಒಂದೆರಡು ಮೂರೆಂದು ವರ್ಣಗ ಳಿಂದಿರುವ
ಮಂತ್ರಗಳೊಳನೆ
ದೊಂದನ್ನೈಸಲೆ ಜಪಿಸುತ್ತಿರುವುದು
ಮಂತ್ರಯೋಗವದು!

ಬಿಂದುವಿನ ರೂಪದಳೊನಾದವ
ನೊಂದಿಯೋ ಮಾನಸವು ಭೇದವ
ನೊಂದದಸು ಗೂಡಿರಲು ತಾಂ
ಲಯಯೋಗವೆನಿಸುವುದು!!

ಒಂದೆರಡು ಮೂರೆಂಟು ವರ್ಣಗಳಿಂದ ಕೂಡಿರುವ ಮಂತ್ರಗಳಲ್ಲಿ ಒಂದನ್ನು ಅನವರತವು ನಿರ್ದಿಷ್ಟವಾಗಿ ಜಪಿಸುತ್ತಿದ್ದರೆ ಅದು ಮಂತ್ರಯೋಗವೆನಿಸುವುದು. ಬಿಂದುವಿನ ರೂಪದಲ್ಲಿ ನಾದವನು ಹೊಂದಿ ಮಾನಸವು ಭೇದವನ್ನು ಹೊಂದದೆ ಅಸುಗೂಡಿರಲು ಅದೇ ಲಯಯೋಗವೆಂದು ತಮ್ಮೊಂದು ವಚನದಲ್ಲಿ ಮಂತ್ರಯೋಗದ ವಿವರಣೆಯನ್ನು ಕೊಡುತ್ತಾರೆ. ಶ್ರೀಗಳು ಈ ಎಲ್ಲ ಉಕ್ತಿಗಳಿಂದ ಪ್ರಾಣಲಿಂಗದ ಅನುಸಂಧಾನದ ಪರಿಯನ್ನು ಇನ್ನು ಆಳವಾಗಿ ವಿವರಿಸುತ್ತಾರೆ. ಪ್ರಾಣಲಿಂಗ ಸಂಬಂಧಿಯಾದ ಶರಣನ ಲಕ್ಷಣ ಆತನ ಪ್ರಾಣಲಿಂಗಾನುಸಂಧಾನ ಪರಶಿವನನ್ನು ಅರಿಯುವಲ್ಲಿ ಆತನ ಸಕ್ರಿಯಾಚರಣೆ ಇದರಿಂದ ಆತನು ಲಿಂಗ ಪ್ರಸಾದಿಯಾವುದರ ಅರ್ಹತೆಯನ್ನು ಪಡೆದುಕೊಳ್ಳುತ್ತಾನೆ ಎಂಬುದನ್ನು ಶ್ರೀಗಳು ಸೂಚಿಸುತ್ತಾರೆ. ಯೋಗಕ್ಕೆ ಕಾರಣವಾದವುಗಳೆಂದರೆ ಧ್ಯಾನ, ಕರಣ ಹಾಗೂ ಸಮಾಧಿ ಈ ಮೂರು ಪ್ರಾಣಲಿಂಗಿ ಸ್ಥಲದಲ್ಲಿ ಅಂತರ್ಗತವಾಗಿವೆ. ಇಷ್ಟಲಿಂಗದಲ್ಲಿ ಭಕ್ತಿ ಮೂಡುವುದರಿಂದ ಅಂಗತ್ರಯ ಕಳೆದು ಲಿಂಗತ್ರಯವಾಗುತ್ತವೆ. ದೃಷ್ಟಿಯೋಗ ಸಾಧನೆಯಾದಂತೆ ಶಿವಯೋಗವು ನೆಲೆಗೊಳ್ಳುವುದನ್ನು ಶ್ರೀಗಳು ಈ ರೀತಿ ಹೇಳುತ್ತಾರೆ.

ಶಿವನ ವಿದ್ಯೆಯು ಶಿವ ಸುಭಕ್ತಿಯು
ಶಿವನ ಪೂಜ್ಯಾಧ್ಯಾನ ಸುವ್ರತ
ವಿವುಗಳೈದನು ತಿಳಿದಿರಲು ಶಿವಯೋಗ ವೆನಿಸುವುದು
ಕುವರನೆ ಕೇಳುಳಿದಯೋಗದ
ವಿವಿಧ ಮಾರ್ಗಗಳಾವು ಸರಿಯೆನಿ
ಸವು ವಿಚಾರಿಸಿ ನೋಡಲಿ ಶಿವಯೋಗ ಸತ್ಪಥಕೆ

ಎಂದು ಹೇಳುವ ಮೂಲ ತಾತ್ಪರ್ಯವೆಂದರೆ ಶಿವಭಕ್ತಿ, ಶಿವಧ್ಯಾನ, ಶಿವಪೂಜೆ, ಶಿವವಿದ್ಯೆ ಹಾಗೂ ಶಿವನಿಷ್ಠೆ ಯಿಂದ ಕೂಡಿದ ಈ ಐದು ವ್ರತಗಳನ್ನು ಅರಿವುದೆ ಶಿವಯೋಗವೆನಿಸುವುದು. ಸತ್ಪಥಕ್ಕೆ ಶಿವಯೋಗವೇ ಶ್ರೇಷ್ಠ ಮಾರ್ಗ ಎನ್ನುವ ಶಾಂತವೀರ ಸ್ವಾಮಿಗಳು ಸರ್ವಾಂಗ ಲಿಂಗರೂಪಿಗಳಾಗಿ ಅದರಲ್ಲಿಯೇ ಆನಂದ ಪಡುತ್ತಾರೆ. ಶಿವಯೋಗದ ಅನುಸಂಧಾನದ ಮಾರ್ಗ ಬಹು ಸೂಕ್ಷ್ಮವಾದುದು. ದೇಹವನ್ನೇ ಆಧಾರವಾಗಿಟ್ಟುಕೊಂಡು ಚೈತನ್ಯ ತುಂಬುವ ಶಿವಯೋಗ ಪ್ರಕ್ರಿಯೆ ಪರಿಪೂರ್ಣ ಜಾಗೃತಿಯ ನಿಲುವನ್ನು ನಿರೂಪಿಸುತ್ತದೆ. ದೇಹದ ತ್ರಿಕೂಟದಲ್ಲಿ ಪರಶಿವನನ್ನು ನೆಲೆಗೊಳಿಸಿ ತ್ರಿಕಾಲವು ಪೂಜಿಸುವ ಶಿವಯೋಗದ ಪರಿಕಲ್ಪನೆ ವಿನೂತನವಾಗಿದೆ. ಅದನ್ನೇ ಶ್ರೀಗಳು ಹೀಗೆ ಹೇಳುತ್ತಾರೆ.

ಶಿವನಿರುವನೆಂಬುವುದನು ವಿದ್ಯೆಯೊ
ಳವಧರಿಸಿ ಸದ್ಭಕ್ತಿಯಿಂದಂ
ಶಿಸಮರ್ಚನೆ ಗೈದು ಶಿವನಾಮದ ಸುಮಂತ್ರವನು!

ತವೆ ಜಪಿಸಿ ತದ್ಧ್ಯಾನ ಗೈಯುವುದೇ
ಶಿವ ಮಹಾವ್ರತ ವಿವುಗಳಿಂ ಸಂ
ಭವಿಸುವುದು ಶಿವಯೋಗ ಸಿದ್ಧಿಯು ವೀರಶೈವರಿಗೆ.

ಕಲಿತ ವಿದ್ಯೆಯ ಮೂಲಕ ಶಿವನ ಅಸ್ತಿತ್ವವನ್ನು ಅರಿತು ಭಕ್ತಿಯಿಂದ ಅವಿರತವಾಗಿ ಶಿವನನ್ನು ಪೂಜಿಸಿ ಶಿವ ಮಂತ್ರವನ್ನು ಜಪಿಸಿ ಧ್ಯಾನ ಕೈಗೊಳ್ಳುವುದೇ ಶಿವಮಹಾವ್ರತವಾಗುವುದು. ಇದರಿಂದ ಶಿವಯೋಗ ಸಿದ್ಧಿಯು ದೊರೆವುದು ಎಂಬ ವಿಷಯವನ್ನು ಶಾಂತವೀರ ಮಹಾಸ್ವಾಮಿಗಳು ಈ ವಚನದ ಮೂಲಕ ಸ್ಪಷ್ಟಪಡಿಸಿದ್ದಾರೆ. ಶಿವಯೋಗ ಸಾಧನೆಯ ಕೊನೆಯ ಹಂತವು ಭಾವಲಿಂಗಾನುಸಂಧಾನದಲ್ಲಿ ಮಗ್ನವಾಗುವ ಮೂಲಕ ನಡೆಯುತ್ತದೆ. ಇದೊಂದು ಅಂತರ್ಮುಖಿ ಅನುಭವವಾಗಿದೆ. ಇದು ಆಗಾಗ ದೊರೆತು ಮರೆಯಾಗುವ ಕ್ಷಣಿಕ ಆನಂದವಲ್ಲ. ಅಖಂಡವಾದ ಶಾಶ್ವತವಾದ ಆನಂದಾನುಭೂತಿಯು ಈ ಅನುಸಂಧಾನದಿಂದ ದೊರೆಯುತ್ತದೆ. ಅಂತೆಯೇ ಶ್ರೀಗಳು ಭಾವಲಿಂಗ ಸಮರಸ ಹೊಂದಿದ ಶಿವಯೋಗಿಯ ನಿಲುವನ್ನು ಭಾವಪೂರ್ಣವಾಗಿ ವಿವರಿಸುತ್ತಾರೆ. ಪರಶಿವನೊಡನೆ ಸಾಮರಸ್ಯ ಹೊಂದಿದ ಸಾಧಕನ ಲಕ್ಷಣಗಳನ್ನು ತಿಳಿಸಿರುವ ಶ್ರೀಗಳು ಶಿವಯೋಗದ ಪ್ರತಿಯೊಂದು ಹಂತವನ್ನು ಸೂಕ್ಷ್ಮವಾಗಿ ಅವಲೋಕನೆಗೆ ಒಳಪಡಿಸಿದ್ದಾರೆ. ವೀರಶೈವ ತತ್ವ ಸಿದ್ದಾಂತಗಳಾದ ಅಷ್ಟಾವರಣಗಳು ಹಾಗೂ ಷಟಸ್ಥಲಗಳ ಮೂಲಕ ಶಿವಯೋಗವನ್ನು ಸಾಧಿಸುವ ಪರಿಯನ್ನು ವಿವರಿಸುತ್ತಾರೆ.

ಅಷ್ಟಾವರಣಗಳಾದ ವಿಭೂತಿ ರುದ್ರಾಕ್ಷಿಗಳು ಭಕ್ತನ ಬಾಹ್ಯಶುದ್ಧಿ ಕೈಗೊಳ್ಳಲು ಸಹಾಯಕವಾದರೆ, ಇಷ್ಟಲಿಂಗ, ಮಂತ್ರಗಳು ಮನಸ್ಸಿನ ಏಕಾಗ್ರತೆಗೆ ಕಾರಣವಾಗುತ್ತವೆ. ಆದರೆ ಕೇವಲ ದೇಹ ಶುದ್ಧಿಯಾದರೆ ಸಾಲದು, ಮನುಷ್ಯನ ಮನಸುದ್ಧಿಯಾಗುವುದು ಅಷ್ಟೇ ಅವಶ್ಯಕ. ಮನಸ್ಸಿನ ಚಂಚಲತೆ ಬಹಳ ವಿರೂಪವಾದುದು. ಇಂತಹ ಚಂಚಲ ಮನಸ್ಸನ್ನು ನಿಗ್ರಹಿಸುವವನೆ ಯೋಗಿ. ವಿಷಯವಾಸನೆಗೆ ಎಳೆಸುವ ಮನಸ್ಸಿನ ಏಕಾಗ್ರತೆಗೆ ಕಾರಣ ವಾಗುವುದು ಲಿಂಗ. ಕಾಯಾ, ವಾಚಾ, ಮನಸಾ ಶುದ್ಧೀಕರಿಸಿ ಭಕ್ತನ ಅಂಗವೇ ಲಿಂಗಮಯಗೊಳಿಸುವುದು. ಇಷ್ಟಲಿಂಗದಲ್ಲಿ ಮನಸು ನೆಡಲು' ನಮಃ ಶಿವಾಯ' ವೆಂಬ ಪಂಚಾಕ್ಷರಿ ಮಂತ್ರ ಜಪಿಸುವುದರಿಂದ ಶಿವಯೋಗ ಪ್ರಾಪ್ತಿಯಾಗುವುದು.

ಇನ್ನು ಷಟಸ್ಥಲ ಮಾರ್ಗದಲ್ಲಿ ಶಿವಯೋಗವನ್ನು ಕಾಣುವುದಾದರೆ ಷಟಸ್ಥಲ ಮಾರ್ಗದ ಇಷ್ಟಲಿಂಗದಲ್ಲಿ ಭಕ್ತಿ ನೆಲೆಗೊಳಿಸಿ, ಮಹೇಶ್ವರ ಸ್ಥಲದಲ್ಲಿ ನಿಷ್ಠೆ ಗಟ್ಟಿಗೊಳಿಸಿ, ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲದಲ್ಲಿ ಕರ್ಮಯೋಗದ ಮಹತ್ವ ಗೋಚರಿಸುತ್ತದೆ. ಪ್ರಸಾದಿ ಸ್ಥಲದಲ್ಲಿ ಸಾಧಕನು ತಾನು ಮಾಡುವ ಕಾಯಕ ತನಗಾಗಿ ಅಲ್ಲ, ಅದು ಸಮಾಜಕ್ಕಾಗಿ, ಜನಹಿತಕ್ಕಾಗಿ ಎನ್ನುವ ಭಾವನೆ ಮೂಡುತ್ತದೆ. ದೇಹ ಶ್ರಮದಿಂದ ಬಂದುದು ಮಾತ್ರ ದಾಸೋಹಕ್ಕೆ ವಿನಿಯೋಗಿಸುವುದು. ಆದರಿಂದ ವ್ಯಕ್ತಿ ಮತ್ತು ಸಮಾಜದ ಏಳಿಗೆಯನ್ನು ಕೈಗೊಳ್ಳಲು ಸಾಧ್ಯವಾಗುವುದು. ಇಲ್ಲಿ ಭಕ್ತಿಯು ಕ್ರಿಯಾ ರೂಪದಿಂದ ಜ್ಞಾನ ಮಾರ್ಗದಲ್ಲಿ ಮುನ್ನಡೆಯುತ್ತದೆ. ಪ್ರಾಣಲಿಂಗಿ ಸ್ಥಲದಲ್ಲಿ ಇಷ್ಟಲಿಂಗವು ಪ್ರಾಣಲಿಂಗದಲ್ಲಿ ಒಂದಾಗುತ್ತದೆ. ಹೀಗೆ ಅಂಗ ಲಿಂಗದಲ್ಲಿ ಬೆರೆಯುವ ಅನುಸಂಧಾನವೇ ಶಿವಯೋಗ. ಪ್ರಾಣಲಿಂಗಿ ಸ್ಥಲದಲ್ಲಿ ಧ್ಯಾನದ ಮೂಲಕ ಯೋಗದ ಕೊನೆಯ ಹಂತ ತಲುಪಿ ಶಿವಯೋಗವೆಂಬ ಪಾರಮಾರ್ಥಿಕವು ಶಾಶ್ವತ ಸುಖವನ್ನು ಹೊಂದಲು ಸಾಧ್ಯವಾಗುತ್ತದೆಂಬುದು ಶಾಂತವೀರ ಮಹಾಸ್ವಾಮಿಗಳ ಸ್ಪಷ್ಟ ನಿಲುವಾಗಿದೆ.

ಶಿವಯೋಗದಲ್ಲಿ ದೇಹ ಪರಿಪೂರ್ಣತೆಯನ್ನು ಪಡೆವುದು. ತನು, ಮನ, ಧನ ಗುರುಲಿಂಗ ಜಂಗಮಕ್ಕೆ ಎಡೆಮಾಡಿ ಸರ್ವಾರ್ಪಣ ಭಾವದಿಂದ ಸಮಾಜದಲ್ಲಿ ಬೆರೆತು ವಿಶಿಷ್ಟ ರೀತಿಯಲ್ಲಿ ದೇವರನ್ನು ಕಾಣುವ ಬಗೆ ಇದಾಗಿದೆ. ತನು ಮನಗಳನ್ನು ಜನಪರ ಕಾರ್ಯಗಳಲ್ಲಿ ತೊಡಗಿಸಿ ಕೊನೆಗೆ ನಿರ್ಲಿಪ್ತವಾಗಿ ಅನಂತತೆಯಲ್ಲಿ ಲೀನಗೊಳ್ಳುವುದೇ ಶಿವಯೋಗದ ಅಂತಿಮ ಗುರಿಯಾಗಿದೆ. ನಿಷ್ಕಾಮ ಕರ್ಮದಿಂದ ಜ್ಞಾನ ಮಾರ್ಗದಲ್ಲಿ ನಡೆಸುವ ಶಿವಯೋಗವು ಮುಕ್ತಿಯ ಮಾರ್ಗವನ್ನು ತೋರುವ ಪರಮ ಸತ್ಯವಾಗಿದೆ.

ಶಿವಯೋಗಿಗೆ ಕರ್ಮವಿಲ್ಲ. ಶಿವಯೋಗಿ ಅಥವಾ ಶಿವಶರಣರ ಪಥವು ಸಂಪೂರ್ಣವಾಗಿ ಲಿಂಗಾಧೀನವಾದುದು. ಅಂತೆಯೇ ಶಿವಭಕ್ತರಿಗೆ ಸತ್ಪಥವನ್ನರಿಯಲು ಶಿವಯೋಗವು ಸೋಪಾನವಾಗಿದೆ. ಒಟ್ಟಿನಲ್ಲಿ ಶರೀರ, ಪ್ರಾಣ, ಮನಸ್ಸು ಹಾಗೂ ಬುದ್ಧಿಗಳನ್ನು ಶುದ್ಧಗೊಳಿಸಿ ಅವುಗಳ ಅಸಾಧಾರಣ ಶಕ್ತಿಯನ್ನು ಪ್ರಕಟಗೊಳಿಸುವ ಸಾಧನವಾಗಿ ನಿಲ್ಲುತ್ತದೆ ಶಿವಯೋಗ. ಈ ಶಿವಯೋಗದಲ್ಲಿ ಎಲ್ಲ ಶಕ್ತಿಗಳು ವಿಕಾಸ ಹೊಂದಿ ಲಿಂಗಾಂಗ ಸಾಮರಸ್ಯಕ್ಕೆ ಕಾರಣವಾಗುತ್ತದೆ ಎಂಬುದನ್ನು ಶ್ರೀಗಳು ಮಾರ್ಮಿಕವಾಗಿ ಅರ್ಥ ಮಾಡಿಸಿದ್ದಾರೆ. ಕರಸ್ಥಲದಲ್ಲಿದ್ದು ಪೂಜಿಸುವ ಇಷ್ಟಲಿಂಗ ಅನುಸಂಧಾನದ ಮೂಲಕ ಶಿವ ಮತ್ತು ಜೀವರ ಅವಿನಾಭಾವ ಸಂಬಂಧವನ್ನು ಅನುಭವಿಸಿರುವ ಶ್ರೀ ಶಾಂತವೀರ ಮಹಾಸ್ವಾಮಿಗಳು ಅದನ್ನು ತಮ್ಮ ಅನೇಕ ವಚನಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ಬರಿಯ ಕುಂಭಕ ದೊಳೋ ಸಮುದ್ರಾ
ಕರಣದೊಳೊ ಅಷ್ಟಾಂಗ ಮಾರ್ಗದೇ
ಮರುತನನು ನಿಗ್ರಹಿಸಲದು ಹಠಯೋಗ ವೆನಿಸುವುದು.!

ಪರಿವ ಮನಸಿನ ವ್ಯತಿರಿಕ್ತ ಗೊಂ
ಡರುನಿಂ ಲಕ್ಷತ್ರಯದೊಳೀ
ಶ್ವರನ ಸಾಕ್ಷಾತ್ಕರಿಸಿಕೊಳ್ಳುದೆ ರಾಜಯೋಗವದು

ಬರಿಯ ಕುಂಭಕದಲ್ಲಿಯೋ, ಮುದ್ರಾಕರಣದಲ್ಲಿಯೋ ಅಷ್ಟಾಂಗ ಮಾರ್ಗದಿಂದ ಮನಸನ್ನು ನಿಗ್ರಹಿಸಲು ಅದು ಹಠಯೋಗವೆನಿಸುವುದು. ಚಂಚಲವಾದ ಮನಸಿನ ಪ್ರವೃತ್ತಿಯನ್ನು ಹದಮಾಡಿ ಪಕ್ವಗೊಳಿಸಿ ಅರಿವಿನೊಂದಿಗೆ ಲಕ್ಷತ್ರಯದ ಮೂಲಕ ಈಶ್ವರನನ್ನು ಸಾಕ್ಷಾತ್ಕರಿಸಿಕೊಳ್ಳುವುದೆ ರಾಜಯೋಗವೆನಿಸುವುದು. ಈ ತತ್ವಗಳ ಮೂಲಕ ಶ್ರೀಗಳು ಶಿವಯೋಗ ಸಾಧಕನಲ್ಲಿ ಉಂಟಾಗುವ ಪ್ರಯೋಜನವನ್ನು ಸೂಚಿಸುತ್ತ ಭಕ್ತನ ಸದ್ಗುಣಗಳನ್ನು ಎತ್ತಿ ಹೇಳುವುದರೊಂದಿಗೆ ಶಿವಯೋಗದ ಸ್ವರೂಪವನ್ನು ಸ್ಪಷ್ಟವಾಗಿ ಗುರುತಿಸುತ್ತಾರೆ. ಹೀಗೆ ವ್ಯವಸ್ಥಿತವಾದ ರೀತಿಯಲ್ಲಿ ವೀರಶೈವ ಧರ್ಮದ ತತ್ವಗಳು ಆಚಾರ ವಿಚಾರಗಳನ್ನು ಶಾಸ್ತ್ರೀಯವಾಗಿ ವಿವೇಚನೆಗೊಳಪಡಿಸಿದ ಶ್ರೀ ಶಾಂತವೀರ ಮಹಾಸ್ವಾಮಿಗಳು ಅದ್ವಿತೀಯ ಸಾಧನಾ ಜೀವಿಗಳಾಗಿ ತೋರುತ್ತಾರೆ. ಇಷ್ಟೆಲ್ಲ ಸಾಧನೆಗೆ ತಮ್ಮ ಸದ್ಗುರುಗಳ ಉಪದೇಶವೇ ಕಾರಣವೆಂದು ಶ್ರೀಗಳು ವಿನಯಪೂರ್ವಕವಾಗಿ ಅವರ ಅಡಿದಾವರೆಗಳಿಗೆ ವಂದಿಸುತ್ತ ಹೀಗೆ ನುಡಿಯುತ್ತಾರೆ.

ವಿದಿತ ಗುರು ಬೋಧನಾಮೃತದ ಪಾ
ನದ ಸುಖವ ಪಡೆದಿಂತು ಮುಕ್ತಿ
ಪ್ರದದ ತತ್ವದ ಪಂಕಜಕ್ಕೆರಗುತ್ತಿ ಪುತ್ರನು ತಾಂ!

ಸದಯನೇ ಮದ್ಗುರುವೆ ನನ
ಭ್ಯುದಯ ಮೂರ್ತಿಯೇ ಧನ್ಯನಾದೆನು
ವಿದಿತವಾಯಿತು ಶಿವಾನುಭವವು ಯೆನುತೆ ವಂದಿಸಿದ.!!

ಮಹಾಮಹಿಮರೆನಿಸಿದ ಗುರುವಿನ ಬೋಧಾಮೃತದ ಸುಖವನ್ನು ನೀಡಿ ಬದುಕಿನಲ್ಲಿ ಮುಕ್ತಿ ಮಾರ್ಗವನ್ನು ತೋರಿದ ಸದ್ಗುರುವಿನ ಪಾದ ಪಂಕಜಕ್ಕೆ ನಮಿಸುತ್ತೇನೆ. ನನ್ನ ಅಭ್ಯುದಯದ ಮೂರ್ತಿಯೇ ನಿನ್ನ ಪಾದ ಕಮಲಗಳಿಗೆ ನಮಿಸಿ ಧನ್ಯನಾದೆನು. ನಿನ್ನ ಕರುಣೆಯಿಂದ ಶಿವಾನುಭವ ದಾರಿಯ ಅರಿವಾಯಿತು. ಇದಕ್ಕೆಲ್ಲ ಸದ್ಗುರುವಿನ ಉಪದೇಶಾಮೃತವೇ ಕಾರಣ ಎಂದು ಹೇಳುವ ಶ್ರೀ ಶಾಂತವೀರ ಮಹಾಸ್ವಾಮಿಗಳ ಘನತೆ ಮತ್ತು ವಿನಮ್ರತೆಗಳು ಅಭಿವ್ಯಕ್ತಗೊಂಡಿರುವುದು ಕಂಡು ಬರುತ್ತದೆ. ಶಾಂತವೀರ ಮಹಾಸ್ವಾಮಿಗಳ ಮಹಿಮಾನ್ವಿತ ಸಾಧನೆಯನ್ನು ಕಂಡ ಗುರುಗಳು ಹರ್ಷಗೊಂಡರು. ಸುತ್ತಮುತ್ತಲ ಪ್ರದೇಶಗಳಲ್ಲಿ ಶ್ರೀಗಳ ಶಿವಕಾರುಣ್ಯ ಕಸ್ತೂರಿಯಂತೆ ಪಸರಿಸಿತು. ಜನರೆಲ್ಲ

ಶಾಂತವೀರ ಮಹಾಸ್ವಾಮಿಗಳು ಮಹಾಶರಣರೆಂದು ಹರ್ಷೋಲ್ಲಾಸದಿಂದ ಕೊಂಡಾಡಿದರು.

ನವ ಜಗದ್ಗುರುಗಳು ಶಿವನ ಘನ
ಶಿವ ಸುಸೇವೆಯ ಕಂಡು ಬಹು
ಹರುಷ ತಾಳುತಲಿರ್ದರೀ ಪರಿಯೊಳು ಸಿರಲಿಕ್ಕಾಗಿ!!

ಭವನಸಮದ ಜಗದ್ಗುರುಗಳಿಗೆ
ಜಾವದೊಳೊಂದು ಸುಸ್ವಪ್ನವಾಯಿತು
ಅವಿರತಂ ನಿಮ್ಮಲಿರುವ ಶ್ರೀ ಶಾಂತವೀರ ಮರಿ!!

ಜಗದ್ಗುರುಗಳು ಶಾಂತವೀರರ ಘನತರವಾದ ಶಿವಸೇವೆಯನ್ನು ಕಂಡು ಸಂತೋಷಗೊಂಡರು. ಹೀಗಿರಲು ಒಂದು ದಿನ ಬೆಳಗಿನ ಜಾವದಲ್ಲಿ ಗುರುಗಳಿಗೆ ಶುಭ ಸ್ವಪ್ನವಾಯಿತು. ಪರಮಾತ್ಮನು ಗುರುಗಳ ಸ್ವಪ್ನದಲ್ಲಿ ಬಂದು ನಿಮ್ಮ ಕರುಣಾಶ್ರಯದಲ್ಲಿರುವ ಶಾಂತವೀರ ಮಹಾಮಹಿಮ ಶಿಷ್ಯನನ್ನು ಲೋಕಕಲ್ಯಾಣಕ್ಕಾಗಿ ಬೇರೆಡೆ ಕಳಿಸಿಕೊಡಬೇಕೆಂದು ಸ್ವಪ್ನದಲ್ಲಿ ನೀಡಿದ ಸಂದೇಶವಾಗಿತ್ತು. ಈ ಸ್ವಪ್ನದ ಸಂದೇಶವೇ ಶಾಂತವೀರ ಮಹಾಸ್ವಾಮಿಗಳಿಗೆ ಮಹಾನ್ ಸಾಧಕರಾಗಲು ಮೂಲ ಕಾರಣವಾಗಿ ಪ್ರೇರಣೆ ನೀಡಿತು. ಅವರ ಲೋಕ ಸಂಚಾರದ ಮುನ್ಸೂಚನೆಯ ಸಂಕೇತವೇ ಗುರುಗಳಿಗೆ ಬಿದ್ದ ಕನಸಾಗಿತ್ತು. ಸ್ವಪ್ನದ ಸಂದೇಶವನ್ನು ಈ ವಚನದ ಮೂಲಕ ಹೀಗೆ ಹೇಳುತ್ತಾರೆ.

ದೇವರು ನೈಜಾಮ ರಾಜ್ಯದೊ
ಳಾವಾಗಂ ಯಿರುತಿದ್ದು ರಾಜಿಪ
ಕೋವಿದರ ಸ್ಥಲಮಾದ ನಾರಾಯಣಪುರಕೆ ಜವದಿಂ!

ಆ ವಿಭವದಾ ಮಠವ ಸ್ಥಾಪಿಸ
ಲೋವಿ ಘನತಪವನ್ನು ಗೈಯ್ಯಲು
ನೀವು ಕಳುಹಿಸಿ ಕೊಡಿರೆಂಬುದಾಗಿ ಸ್ವಪ್ನವದು!!

ಗುರುಗಳಿಗೆ ನೈಜಾಮ ರಾಜ್ಯದಲ್ಲಿರುವ ಸದಾ ಕಾಲವು ಪಂಡಿತರಿಂದ, ವಿದ್ವಾಂಸರಿಂದ, ಭಕ್ತಿ ಭಾವದಿಂದ ಶೋಭಿಸುತ್ತಿರುವ ನಾರಾಯಣಪುರ ದಲ್ಲಿ ಹೊಸದೊಂದು ಮಠವನ್ನು ಸ್ಥಾಪಿಸಲು ಮಠದ ಮರಿಯೊಬ್ಬರನ್ನು ಕಳುಹಿಸಿಕೊಡಬೇಕೆಂಬುದು ಸ್ವಪ್ನದಲ್ಲಿ ದೇವರು ಕಾಣಿಸಿಕೊಂಡು ಗುರುಗಳಿಗೆ ನೀಡಿದ ಸಂದೇಶವಾಗಿತ್ತು. ಅದೇ ಕನಸು ಶ್ರೀ ಶಾಂತವೀರರಿಗೂ ಅಂದೇ ಬಿದ್ದಿರುವುದು ಕಾಕತಾಳೀಯ. ಶಾಂತವೀರ ಸ್ವಾಮೀಜಿಗಳು ತಮ್ಮ ಸ್ವಪ್ನದ ಸಂದೇಶವನ್ನು ಈ ವಚನದಲ್ಲಿ ಈ ರೀತಿ ವಿವರಿಸುತ್ತಾರೆ.

ಬೀಳೆ ಮೇಣಾ ಶಾಂತವೀರರಿಗೂ
ಆ ಲಸಿತ ಬೃಹ್ಮಠವ ತ್ಯಜಿಸಿ ವಿ
ಶಾಲ ಮನದಿಂ ಪೋಗಿ ಯಾವುದೊ ಕಾಡಿನೊಳು ನಾಡೆ!

ಲೀಲೆಯಿಂ ಕಾಕತಾಳಿಯಂತೆ ಸ್ವಪ್ನವು
ಬೀಳಲಾ ಮರುದಿವಸ ದುದಯಕೆ
ಶೂಲಿ ಸಮುದಾ ಶ್ರೀ ಜಗದ್ಗುರು ಶಾಂತವೀರನು!!

ಗುರುಗಳಿಗೆ ಬಿದ್ದ ಕನಸೇ ಶಾಂತ ವೀರರಿಗೂ ಬೀಳಲು ವಿಶಾಲವಾದ ಪರಮ ಪವಿತ್ರ ಬೃಹನ್ಮಠವ ತ್ಯಜಿಸಿ ವಿಶಾಲ ಮನಸ್ಕನಾಗಿ ಯಾವುದೋ ಕಾಡಿನಲ್ಲಿ ಸಂತೋಷದಿಂದ ಕುಳಿತು ಧ್ಯಾನದಲ್ಲಿ ತೊಡಗಿದಂತೆ ಕನಸಿನಲ್ಲಿ ಭಾಸವಾಯಿತು. ಮರುದಿವಸ ಉದಯ ಕಾಲದಲ್ಲಿ ಶಿವರೂಪ ಸಮಾನರಾದ ಗುರುಗಳು ಶಾಂತವೀರರನ್ನು ಕರೆದು ತಾವು ಕಂಡ ಕನಸಿನ ಸ್ವರೂಪವನ್ನು ವಿವರಿಸಿದರು. ಅದರ ಫಲವೇ ಶಾಂತವೀರ ಮಹಾಸ್ವಾಮಿಗಳು ಲೋಕಸಂಚಾರ ಕೈಗೊಂಡು ನಾರಾಯಣಪುರಕ್ಕೆ ಬಂದು ಘನ ಘೋರವಾದ ಕಾಡಿನಲ್ಲಿ ತಪಸ್ಸನ್ನು ಮಾಡಿದರು.ಅನೇಕ ಕ್ರೂರ ಮೃಗಗಳ ಮಧ್ಯದಲ್ಲಿಯೇ ತಮ್ಮ ಶಿವಯೋಗದ ಸಾಧನೆ ಮಾಡಿ ಗುರುಗಳ ಆದೇಶದಂತೆ, ಸ್ವಪ್ನದ ಸಂದೇಶದಂತೆ ಶಾಂತವೀರ ಮಹಾಸ್ವಾಮಿಗಳು ನಾರಾಯಣಪುರದಲ್ಲಿ ಮಠವೊಂದನ್ನು ಸ್ಥಾಪಿಸಿದರು. ಅದುವೇ ಖಾಸ ಮಠವಾಗಿ ಇಂದಿಗೂ ಅನೇಕ ಜನ ಭಕ್ತರ ಆಶೋತ್ತರ ಗಳನ್ನು ಈಡೇರಿಸುವ ಬೃಹನ್ಮಠವಾಗಿ ಬೆಳೆದು ನಿಂತಿದೆ.

**೫. ಸಮಾರೋಪ**

ಗುರುಗಳ ಅಣತಿಯ ಮೇರೆಗೆ ಲೋಕಸಂಚಾರಕ್ಕೆ ಅಣಿಯಾದ ಶಿವಯೋಗಿ ಶಾಂತ ವೀರರು ಗುರುಗಳ ಆಶೀರ್ವಾದ ಪಡೆದು ಹೊರಟು ನಿಂತಾಗ ಗುರುಗಳು ಶಿಷ್ಯ ಶಾಂತವೀರರಿಗೆ ಹೇಳಿದ ಮಾತುಗಳು ಆಶೀರ್ವಚನಗಳ ರೂಪದಲ್ಲಿ ನೀಡಿದ ಮಾರ್ಗದರ್ಶನವಾಗಿದೆ. ಈ ಧರೆಯಲ್ಲಿ ಶೋಭಿಸುತ್ತಿರುವ ಪವಿತ್ರವಾದ ನಾರಾಯಣಪುರದ ಕಾಡಿನಲ್ಲಿ ಮಹಾತಪಸ್ಸನ್ನು ಮಾಡಿ ಈ ಭೂಮಿಮೇಲೆ ಅನೇಕ ಪವಾಡಗಳನ್ನು ಮಾಡಿ ಭಕ್ತ ಸಮೂಹಕ್ಕೆ ಕಲ್ಯಾಣವನ್ನುಂಟು ಮಾಡುತ್ತ ಲೋಕದಲ್ಲಿ ನಿನ್ನ ಕೀರ್ತಿ ಎಲ್ಲೆಡೆಯೂ ಹರಡಲಿ ಎಂದು ಹಾರೈಸಿ ಬೀಳ್ಕೊಡುತ್ತಾರೆ. ನೈಜಾಮ ಆಡಳಿತದ ನಾರಾಯಣಪುರದ ಕಡೆಗೆ ಪ್ರಯಾಣ ಬೆಳೆಸಿದ ಶಾಂತವೀರರು ಕಾಡಿನಲ್ಲಿ ಸಂಚರಿಸುತ್ತ ಅನೇಕ ದಿನಗಳ ಕಾಲ ನಡೆದು ಕೊನೆಗೆ ನಾರಾಯಣಪುರದ ಅರಣ್ಯ ಪ್ರದೇಶಕ್ಕೆ ತಲುಪಿದರು. ಅಲ್ಲಿ ಶ್ರೀಗಳು ಏಕಾಗ್ರ ಚಿತ್ತದ ತಪಸ್ಸನ್ನು ಕೈಗೊಂಡರು. ಶ್ರೀಗಳು ತಪಸ್ಸಿಗೆ ಕುಳಿತರೆಂದರೆ ಬಾಹ್ಯ ಪ್ರಪಂಚವನ್ನು ಮರೆತು ಯೋಗಾನಂದದಲ್ಲಿ ತಲ್ಲೀನರಾಗುತ್ತಿದ್ದರು. ಅಂಗೈಯೊಳಗಿನ ಲಿಂಗವನ್ನು ಪೂಜಿಸುತ್ತ ಪರಮಾನಂದ ಪಡೆದು ಶಿವಯೋಗ ಸಾಧಕರಾದರು. ತಮ್ಮ ತಪಸ್ಸಿನ ಫಲವಾಗಿ ಆ ಕಾಡಿನ ತುಂಬ ಇರುವ ಕ್ರೂರ ಪ್ರಾಣಿಗಳು ಸಾಧು ಪ್ರಾಣಿಗಳಾದವು. ಲಿಂಗಾಂಗ ಸಾಮರಸ್ಯ

ಹೊಂದಿದ ಶ್ರೀಗಳು ಭಕ್ತ ಸಮೂಹದ ಆಸೆ ಆಕಾಂಕ್ಷೆಗಳನ್ನು ತೀರಿಸುತ್ತ, ರೋಗ ರುಜಿನಗಳನ್ನು ವಾಸಿಮಾಡುತ್ತ ಶಿವಾನುಭವದಲ್ಲಿ ಮಗ್ನರಾಗಿ ಮಹಿಮಾನ್ವಿತರೆನಿಕೊಂಡರು. ಶಾಂತವೀರ ಮಹಾಸ್ವಾಮಿಗಳು ಭಕ್ತರ ಅನುಕೂಲಕ್ಕಾಗಿ ಲೋಕಸಂಚಾರ ಮಾಡಿ ಭಕ್ತರ ಅನೇಕ ಮನೋಭಿಲಾಷೆಗಳನ್ನು ಈಡೇರಿಸಿದರು. ತಾವು ಬಂದ ಕಾರ್ಯ ಮುಗಿದ ಮೇಲೆ ಶ್ರೀಗಳು ಭಕ್ತ ಸಮೂಹವನ್ನೆಲ್ಲ ಕರೆದು ನಾನು ಬಂದ ಕಾರ್ಯ ಮುಗಿಯಿತು. ಆ ಪರಶಿವನ ಆದೇಶವಾಯಿತು ಹೊರಡುತ್ತೇನೆ ಎಂದಾಗ ಇಡೀ ಭಕ್ತ ಸಮೂಹ ದುಃಖದ ಕಡಲಲ್ಲಿ ಮುಳುಗಿಹೋಯಿತು. ಅಂಗೈಯಲ್ಲಿ ಲಿಂಗವಿಡಿದು ತಮ್ಮ ದೃಷ್ಟಿ ಸೇರಿಸಿ ಉರಿ ಕರ್ಪೂರ ಬೆರೆತಂತೆ ಲಿಂಗದಲ್ಲಿ ಲಿಂಗೈಕ್ಯರಾದರು. ಅಖಂಡವಾದ ಶಿವಯೋಗದಲ್ಲಿ ಐಕ್ಯರಾದರು. ಮಹಾತಪಸ್ಸನ್ನು ಕೈಗೊಂಡು ಮಹಾಯೋಗಿಗಳಾಗಿ ಸಕಲ ಸದ್ಭಕ್ತರಿಗೆ ಸನ್ಮಂಗಳವನ್ನುಂಟು ಮಾಡಿ ಭುವಿಯನ್ನು ಸ್ವರ್ಗವನ್ನಾಗಿ ಮಾಡಿದರು. ಶ್ರೀಗಳು ಪರಿವರ್ತನಾಶೀಲ ಸಮಾಜವನ್ನು ಕಟ್ಟಿಬೆಳೆಸಿದ ಮಹಾತ್ಮರು ಶಾಂತವೀರ ಮಹಾಸ್ವಾಮಿಗಳು. ಇಂತಹ ಮಹಾತ್ಮರ ಆದರ್ಶ ಮೌಲ್ಯಗಳ ಕುರಿತು ಓದುವ ಸಕಲರಿಗೂ ಶುಭವಾಗಲಿ ಮತ್ತು ಸನ್ಮಂಗಳವುಂಟಾಗಲೆಂದು ಆಶಿಸೋಣ.

ಡಾ. ಪಿ. ಅಶೋಕ ಕುಮಾರ ಮಟ್ಟಿ
ಪ್ರಾಧ್ಯಾಪಕರು, ಸರಕಾರಿ ಪದವಿ ಕಾಲೇಜು
ಸ್ನಾತಕೋತ್ತರ ಅಧ್ಯಯನ ಮತ್ತು
ಸಂಶೋಧನ ಕೇಂದ್ರ ಯಾದಗಿರಿ.

**ಪರಾಮರ್ಶನ ಗ್ರಂಥಗಳು**

1. ಸಿದ್ಧರಾಮ ಶಿವಯೋಗಿ-. ಡಾ. ಎಂ. ವಿ. ಕೊಟ್ರುಶೆಟ್ಟಿ.
2. ವಚನ ವಸಂತ – ದೊಡ್ಡ ಬಸಪ್ಪ ಬಳೂರಗಿ
3. ಸಾಹಿತ್ಯ ಚಿಂತನ – ಡಾ. ಚೆನ್ನವೀರ ಕಣವಿ
4. ಸಿದ್ಧರಾಮ ಚಾರಿತ್ರ್ಯ. – ಡಾ. ಟಿ. ಎಸ್. ವೆಂಕಣಯ್ಯ
5. ಷಟಸ್ಥಲ ಪ್ರತಿಭೆ – ಡಾ. ಆರ್. ಸಿ. ಹಿರೇಮಠ
6. ಶರಣ ವಾಣಿ – ಆರ್.ಎಂ. ಕವೀಶ್ವರ
7. ವೀರಶೈವ ಸಾಹಿತ್ಯ ಮತ್ತು ಇತಿಹಾಸ – ಬಿ. ಶಿವಮೂರ್ತಿ ಶಾಸ್ತ್ರಿ
8. ವೀರಶೈವ ಚಿಂತಾಮಣಿ – ಡಾ. ಆರ್. ಸಿ. ಹಿರೇಮಠ
9. ವಚನ ಪರುಷ – ಡಾ. ವಿದ್ಯಾಶಂಕರ
10. ವಚನ ಶಾಸ್ತ್ರ ರಹಸ್ಯ – ಆರ್. ಆರ್. ದಿವಾಕರ